ಓ.ಎಸ್.ನಂ. **1977/19**
ಪಿ.ಡಬ್ಲ್ಯೂ.**01**

**ದಿಃ-26-11-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

ಮುಂದುವರೆದ **ಮುಖ್ಯವಿಚಾರಣೆಃ ವಾದಿ ಪರ ಶ್ರೀ. ವಕೀಲರಿಂದ ಃ**

ವ್ಯಾಟ್ ರಿಟರ್ನ್ಸ್ ದಾಖಲಾತಿ **ನಿಪಿ.**13 ಎಂದು, ಇ-ಪೈಲಿಂಗ್ ಸಿಸ್ಟಮ್ ನಿಪಿ.14 ಎಂದು, ಕ್ರಿಮಿನಲ್ ಅಪೀಲ್ ನಂ.32/19 ರ ಆರ್ಡರ್ ಶೀಟ್ ದೃಢೀಕೃತ ನಕಲು ನಿಪಿ.15 ಎಂದು ಗುರುತಿಸಲಾಯಿತು.

**ಪಾಟಿಸವಾಲು ಃ ಪ್ರತಿವಾದಿ ಪರ ಶ್ರೀ. ವಕೀಲರಿಂದ ಃ**

ಪ್ರತಿವಾದಿ ಪರ ವಕೀಲರು ಪಾಟೀಸವಾಲಿಗೆ ಅವಕಾಶ ಕೇಳಿದ್ದರಿಂದ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಸಾಬಪ್ಪ)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**

**ದಿಃ-24-08-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟಿಸವಾಲು ಃ ಪ್ರತಿವಾದಿ ಪರ ಶ್ರೀ. ಎಂ.ಪಿ ವಕೀಲರಿಂದ ಃ**

ವಾದಿ ನಂ.3 ಸುಷ್ಮ ನನ್ನ ಪತ್ನಿಯಾಗಬೇಕು. ದ ಕ್ರಿಯೇಟೀವ್ ಸೈನ್ಸ್ ಎಂಬುದರ ಪ್ರೊಪ್ರೈಟರ್ ಆಕೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅದೊಂದು ಪಾಲುದಾರಿಕಾ ಸಂಸ್ಥೆ ಎಂದು ನುಡಿಯುತ್ತಾರೆ. ದಿನಾಂಕ 20.07.2016 ನನ್ನ ಪತ್ನಿ ಸುಷ್ಮರವರು ದ ಕ್ರಿಯೇಟೀವ್ ಸೈನ್ಸ್ ನ ಪ್ರೊಪ್ರೈಟರ್ ಎಂದು ಹೇಳಿ ಪ್ರತಿವಾದಿ ನಂ.1 ಲೋಕೇಶ್ ರವರ ಗಜಾನನ ಫ್ಯಾಬ್ರಿಕೇಷನ್ ಗೆ ರೂ.9,45,000/- ಬೆಲೆ ಬಾಳುವಷ್ಟು ಕೆಲಸಗಳಿಗೆ ಆರ್ಡರ್ ಪ್ಲೇಸ್ ಮಾಡಿದ್ದರು ಎಂದರೆ ಸರಿಯಲ್ಲ. ಆರ್ಡರ್ ಪ್ಲೇಸ್ ಮಾಡುವಾಗ ನಾನು ಕೂಡ ಇದ್ದೆ ಎಂದರೆ ಸರಿಯಲ್ಲ.

ಈ ಮೇಲಿನ ಆರ್ಡರ್ ಪ್ಲೇಸ್ ನಲ್ಲಿ ತಿಳಿಸಿದ ಕೆಲಸಗಳನ್ನು ಮಾಡಲು ವಾದಿ ನಂ.3 ರವರು ಪ್ರತಿವಾದಿ ನಂ.1 ಗೆ ದಿನಾಂಕ 28.07.2016 ರಂದು ರೂ.1,00,000/-, 06.08.2016 ರಂದು ರೂ.1,00,000/- ಮತ್ತು 24.08.2016 ರಂದು ರೂ.1,00,000/- ತಲಾ ಚೆಕ್ಕುಗಳನ್ನು ಕಾರ್ಪೋರೇಷನ್ ಬ್ಯಾಂಕು, ಪದ್ಮನಾಭನಗರದ ಶಾಖೆಯ ಸಂಬಂಧಿಸಿದ ಚೆಕ್ಕುಗಳನ್ನು ನೀಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಆ ಚೆಕ್ಕುಗಳನ್ನು ನನ್ನ ಹೆಸರಿನ ಖಾತೆಯ ಚೆಕ್ಕಾಗಿರುತ್ತವೆ. ಅದೇ ರೀತಿ ರೂ.3,00,000/-ದ ಚೆಕ್ಕನ್ನು ಸರಕುಗಳನ್ನು ಖರೀದಿಸಲು 2 ನೇ ಪ್ರತಿವಾದಿಗೆ ನಾನು ಖುದ್ದಾಗಿ ನೀಡಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅದರಲ್ಲಿ ನನ್ನ ಹಣ ಮತ್ತು ಕಂಪೆನಿಯ ಹಣ ಸೇರಿರುತ್ತದೆ ಎಂದು ನುಡಿಯುತ್ತಾರೆ.

ನಾವು ಹೇಳಿದಂತಹ ಎಲ್ಲಾ ವರ್ಕ್ ಆರ್ಡರ್ ಗಳನ್ನು 1 ನೇ ಪ್ರತಿವಾದಿಯವರು ಸಂಪೂರ್ಣವಾಗಿ ಮುಗಿಸಿದ್ದರು ಎಂದರೆ ಸರಿಯಲ್ಲ. ಕೆಲಸಗಳೆಲ್ಲಾ ಸಂಪೂರ್ಣವಾದ ನಂತರ ನನ್ನ ಪತ್ನಿ 3 ನೇ ವಾದಿಯವರು 1 ನೇ ಪ್ರತಿವಾದಿಗೆ ರೂ.2,30,000/-ಕ್ಕೆ ಸಂಬಂಧಿಸಿ ರೂ.1,30,000/- ಮತ್ತು ರೂ.1,00,000/- ಎರಡು ಚೆಕ್ಕುಗಳನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. 3 ನೇ ವಾದಿಯವರು ನೀಡಿದ ಈ ಚೆಕ್ಕುಗಳು ಪಾವತಿ ಸ್ಥಗಿತಗೊಳಿಸಲಾಗಿದೆ ಎಂಬ ಷರಾದೊಂದಿಗೆ ಅಮಾನ್ಯಗೊಂಡಿರುತ್ತವೆ ಎಂದರೆ ಸರಿ. ಚೆಕ್ ಅಮಾನ್ಯಗೊಂಡ ವಿರುದ್ಧ 1 ನೇ ಪ್ರತಿವಾದಿಯವರು 3 ನೇ ವಾದಿಯ ಮೇಲೆ ಸಿ.ಸಿ. ನಂ.8292/2016 ರಂತೆ 2 ನೇ ಎಸಿಜೆಎಂ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ. ಆ ಪ್ರಕರಣದಲ್ಲಿ ದಿನಾಂಕ 08.02.2019 ರಂದು ದೋಷಿ ಎಂದು ಸಾಬೀತಾಗಿದೆ ಎಂದು ಮತ್ತು ಅದೇ ಪ್ರಕಾರವಾಗಿ ತೀರ್ಪು ನೀಡಲಾಗಿದೆ ಎಂದರೆ ಸರಿ. ಈ ತೀರ್ಪನ್ನು ಪ್ರಶ್ನಿಸಿ ಬೆಂಗಳೂರು ಗ್ರಾಮಾಂತರದ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಕ್ರಿಮಿನಲ್ ಅಪೀಲ್ 32/2019 ರಂತೆ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿ. ಈ ಅಪೀಲು ಕೂಡ ಡಿಸ್ ಮಿಸ್ ಆಗಿರುತ್ತದೆ ಮತ್ತು ಶಿಕ್ಷೆಯನ್ನು ಎತ್ತಿಹಿಡಿದಿರುತ್ತದೆ ಎಂದರೆ ಸರಿ. ಆನಂತರ ಚೆಕ್ಕಿನ ಹಣ ರೂ.2,30,000/- ಒಂದೇ ಕಂತಿನಲ್ಲಿ 1 ನೇ ಪ್ರತಿವಾದಿಗೆ 3 ನೇ ವಾದಿಯವರು ಪಾವತಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ರೂ.2,40,000/- ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಇನ್ನೂ ರೂ.1,15,000/-ವನ್ನು 3 ನೇ ವಾದಿಯವರು 1 ನೇ ಪ್ರತಿವಾದಿಗೆ ನೀಡಬೇಕಾಗಿದ್ದು ಅದನ್ನು ಇನ್ನೂ ನೀಡಿಲ್ಲ ಎಂದರೆ ಸರಿ. ಈ ಬಗ್ಗೆ 1 ನೇ ಪ್ರತಿವಾದಿಯವರು 3 ನೇ ವಾದಿಯವರ ಮೇಲೆ ಲಘು

ವ್ಯವಹಾರಗಳ ನ್ಯಾಯಾಲಯದಲ್ಲಿ ಎಸ್.ಸಿ. 447/2019 ರಂತೆ ದಾವೆಯನ್ನು ಹೂಡಿದ್ದಾರೆ ಎಂದರೆ ಸರಿ. ಪ್ರಸ್ತುತ ಈ ನ್ಯಾಯಾಲಯದಲ್ಲಿ ದಾವೆ ಇರುವುದರಿಂದ ಎಸ್.ಸಿ. 447/2019 ನ್ನು ನನ್ನ ವಕೀಲರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ತಡೆ ಹಿಡಿದಿರುತ್ತಾರೆ ಎಂದರೆ ಸರಿ.

ನಾನು ನನ್ನ ವಾದ ಪತ್ರದ ಖಂಡಿಕೆ ಸಂಖ್ಯೆ 2 ರಲ್ಲಿ ನಾವು ನೀಡಿದ 12 ಚೆಕ್ಕುಗಳಲ್ಲಿ 10 ಚೆಕ್ಕುಗಳು ಮಾನ್ಯಗೊಂಡಿದ್ದು 2 ಚೆಕ್ಕುಗಳಿಗೆ ಮಾತ್ರ ವ್ಯವಹಾರ ಸ್ಥಗಿತಗೊಳಿಸಲು ನಾನು ಬ್ಯಾಂಕಿಗೆ ಆದೇಶ ನೀಡಿದ್ದೇನೆ ಎಂದರೆ ಸರಿಯಲ್ಲ. ನಾವು ಒಟ್ಟು ರೂ.7,50,000/-ವನ್ನು ನೀಡಿದ್ದು ಅದರಲ್ಲಿ ರೂ.4,00,000/-ವನ್ನು ಲೋಕೇಶ್ ರವರಿಗೂ ಮತ್ತು ರೂ.3,50,000/- ಬೆನಕ ಸ್ಟೀಲ್ಸ್ ರವರಿಗೆ ನೀಡಿರುತ್ತೇವೆ. ಸಾಕ್ಷಿ ಮುಂದುವರಿದು ನನ್ನ ಮೊದಲ ಪಾವತಿಯಾದ ರೂ.1,00,000/-ವನ್ನು ನನ್ನ ಖಾತೆ ಮುಖಾಂತರ ಬೆನಕ ಸ್ಟೀಲ್ಸ್ ರವರಿಗೆ ನೀಡಿರುತ್ತೇನೆ. ಬೆನಕ ಸ್ಟೀಲ್ಸ್ ನಲ್ಲಿ ನನ್ನ ವೈಯಕ್ತಿಕ ಕೆಲಸಗಳಿಗೆ ಕೂಡ ವರ್ಕ್ ಆರ್ಡರ್ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳಿದ ಮೇಲಿನ ಎಲ್ಲಾ ವಿಚಾರಗಳನ್ನು 1 ನೇ ಪ್ರತಿವಾದಿಯವರು 3 ನೇ ವಾದಿಯವರಿಗೆ ಚೆಕ್ ಅಮಾನ್ಯಗೊಂಡ ಬಗ್ಗೆ ನೋಟೀಸು ಕೊಟ್ಟ ಬಗ್ಗೆ ಪ್ರತ್ಯುತ್ತರವನ್ನು ನೀಡುತ್ತಾ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**